ESTD : No. JRB/Cell.II/69/Regn-4876/77-78
Date : 09-12-1977

✆:080-26601442

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

THE BANGALORE CITY DIST. CO-OPERATIVE UNION LTD.,

' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018

E-mail: bcdcu1977@gmail.com

**ಹೆಚ್.ಟಿ. ನಾಗೇಶ್** ಅಧ್ಯಕ್ಷರು | **ಚಾಮರಾಜು ಕೆ.ಎಸ್.** ಉಪಾಧ್ಯಕ್ಷರು | **ವೆಂಕಟೇಶ್ ಎಂ.** ಖಜಾಂಚಿ

## ಪ್ರಕಟಣೆಗಾಗಿ

## ಮಹಿಳಾ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಗೆ ತರಬೇತಿ ಕಾರ್ಯಕ್ರಮ

ಬೆಂಗಳೂರು :– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿ., ಬೆಂಗಳೂರು **ಶ್ರೀ ಮುನ್ನಡೆ ಮಹಿಳಾ ಸಹಕಾರ ಸಂಘ ಸೇವಾ ಸಂಸ್ಥೆ ಬೆಂಗಳೂರು** ದಿನಾಂಕ: 21–07–2024 ರಂದು **ಮಹಿಳಾ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಗೆ** ಒಂದು ದಿನದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಭಾನುವಾರ ಶ್ರೀ ಪಟೇಲ್ ಪದವಿ ಪೂರ್ವ ಕಾಲೇಜು ನಂ.01 ಜ್ಞಾನಕ್ಷಿ ಆವಲಹಳ್ಳಿ ಇಂದಿರಾ ಕ್ಯಾಂಟಿನ್ ಹತ್ತಿರ ಮುನೇಶ್ವರ ಬ್ಲಾಕ್ ಮೈಸೂರು ರಸ್ತೆ ಬೆಂಗಳೂರು–26 ಇಲ್ಲಿ ಏರ್ಪಡಿಸಲಾಗಿತ್ತು.

ಸಮಾರಂಭದ ಉದ್ಘಾಟನೆಯನ್ನು ಅಧ್ಯಕ್ಷರು ಮುನ್ನಡೆ ಮಹಿಳಾ ಸಹಕಾರ ಸಂಘ ನಿ., ಬೆಂಗಳೂರು ಶ್ರೀಮತಿ ಸರಸ್ವತಿ ಎಸ್. ಇವರು ನೇರವೇರಿಸಿ ಮಾತನಾಡುತ್ತಾ, ತೆರೆಮರೆಯ ಉತ್ತಮ ಸಹಕಾರ ಸಂಘಗಳನ್ನು ಗುರುತಿಸಿ ಅವುಗಳ ಬಲವರ್ಧನೆಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ತರಬೇತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ. ಈ ತರಬೇತಿಯಲ್ಲಿ ಪಾಲ್ಗೊಂಡಿರುವ ಎಲ್ಲಾರೂ ಇದರ ಸದುಪಯೋಗವನ್ನು ಪಡೆದು ಕೊಂಡು ಉತ್ತಮವಾಗಿ ಸಂಘಗಳನ್ನು ಬೆಳೆಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಟಿ. ನಾಗೇಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಹೆಣ್ಣುಮಕ್ಕಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಹೆಣೋಂದು ಕಲೆತರೆ ಶಾಲೆಯೊಂದು ತೆರದಂತೆ ಎಂಬುದಾಗಿ ವಿವರಿಸುತ್ತಾ ಇಂದು ಮುಂದುವರೆದಂತಹ ಆದುನಿಕ ಯುಗದಲ್ಲಿ ಹೆಣ್ಣು ಮಕ್ಕಳು ಸ್ವಾಲಾಂಬಿಗಳಾಗಿ ಬದುಕಬೇಕೆಂದರೆ ಎಲ್ಲಾ ಕ್ಷೇತ್ರಗಳಲ್ಲಿ ಅಂದರೆ ಸಾಮಾಜಿಕವಾಗಿ ರಾಜಕೀಯವಾಗಿ ಬೆಳೆಯಬೇಕು ಎಂದು ತೀಳಿಸಿದರು.

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಚಾಮರಾಜು, ನಿರ್ದೇಶಕರಾದ ಶ್ರೀ ವೈ.ವಿ ಶ್ರೀನಿವಾಸಗೌಡ, ಸಂಸ್ಥಾಪಕರು ಪಟೇಲ್ ಶಿಕ್ಷಣ ಸಂಸ್ಥೆಗಳು ಬೆಂಗಳೂರು ಡಾ॥ ಬಿ.ಎಂ. ಪಟೇಲ್‌ಪಾಂಡು, ಅಧ್ಯಕ್ಷರು ಮುನ್ನಡೆ ಸೇವಾ ಸಂಸ್ಥೆ ಬೆಂಗಳೂರು ಶ್ರೀಮತಿ ಯಶೋದಾ ಪಿ.ಹೆಚ್. ಉಪಸ್ಥಿತರಿದ್ದರು. ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಶಶಿಧರ ಎಲೆ ಇವರು ಮಹಿಳಾ ಸಹಕಾರ ಸಂಘಗಳ ನಿರ್ವಹಣೆ ಮತ್ತು ಸದಸ್ಯರುಗಳ ಕರ್ತವ್ಯ ಹಗೂ ಜವಾಬ್ದಾರಿಗಳ ಬಗ್ಗೆ ಉಪನ್ಯಾಸವನ್ನು ನೀಡಿದರು ನಂತರ ಕೆ.ಐ.ಸಿ.ಎಂ ಬೆಂಗಳೂರು ಉಪನ್ಯಾಸಕರಾದ ಶ್ರೀಮತಿ ಕೆ. ಸೌಮ್ಯ ಮಾನಸಿಕ ಒತ್ತಡಗಳ ನಿರ್ವಹಣೆ ಕುರಿತು ಉಪನ್ಯಾಸವನ್ನು ನೀಡಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಮಂಜುನಾಥ ನಾಗಠಾಣ ಸ್ವಾಗತಿಸಿದರು. ಶ್ರೀಮತಿ ಲಕ್ಷ್ಮೀ ಸಿ.ಎಂ. ಇವರುವಂದಿಸಿದರು.

ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ




ONAL
BLIC SCHOOL